# ಎನ್‌ಐಟಿಕೆ ತಾಂತ್ರಿಕ ಫೆಸ್ಟ್

ಮಂಗಳೂರು : 'ಪೆಂಟಮೆರಸ್ ನವಿಟಾಸ್' ಥೀಮ್‌ನೊಂದಿಗೆ 'ಇಂಜಿನಿಯರ್ 2ಕೆ22' ತಾಂತ್ರಿಕ ಫೆಸ್ಟ್ ಎನ್‌ಐಟಿಕೆ ಸುರತ್ಕಲ್‌ನ 17ನೇ ಆವೃತ್ತಿ ನಡೆಯುತ್ತಿದ್ದು, ಸೆ.22–25ರವರೆಗೆ ನಡೆಯಲಿದೆ.

ಇಂಜಿನಿಯರಿಂಗ್ ಫೆಸ್ಟ್ ಅನ್ನು ಮುಖ್ಯ ಅತಿಥಿ ಎನ್‌ಎಂಪಿಎ ಅಧ್ಯಕ್ಷ ಡಾ. ವೆಂಕಟರಮಣ ಅಕ್ಕರಾಜು, ಎನ್‌ಐಟಿಕೆ ಪ್ರಭಾರಿ ನಿರ್ದೇಶಕ ಪ್ರೊ.ಜಿ.ಸಿ. ಮೋಹನ್ ಕುಮಾರ್, ಎನ್‌ಐಟಿಕೆ ವಿದ್ಯಾರ್ಥಿಗಳ ಕಲ್ಯಾಣ ಡೀನ್ ಡಾ.ನರೇಂದ್ರನಾಥ್ ಎಸ್. ಉದ್ಘಾಟಿಸಿದರು

2005ರಲ್ಲಿ ಆರಂಭಗೊಂಡ ತಾಂತ್ರಿಕ ಫೆಸ್ಟ್ ಪ್ರತಿ ವರ್ಷ, 35 ಪ್ಲಸ್ ಈವೆಂಟ್‌ಗಳ ಜೊತೆಗೆ ಎನ್‌ಐಟಿಕೆಯ ಎಲ್ಲಾ ವಿಭಾಗಗಳು ಸೇರಿ, ಸುಮಾರು 8000ಕ್ಕೂ ಹೆಚ್ಚು ಜನ ಈ ಉತ್ಸವದಲ್ಲಿ ಭಾಗವಹಿಸುತ್ತಾರೆ.

ಈ ವರ್ಷ 'ಇಂಜಿನಿಯರ್ 2ಐ22' ಗೇಮಿಂಗ್, ಬಿಸಿನೆಸ್, ಫೈನಾನ್ಸ್, ಮಾರ್ಕೆಟಿಂಗ್, ಆಟೋಮೊಬೈಲ್ಸ್, , ರೊಬೊಟಿಕ್ಸ್, ಮೈನಿಂಗ್, ಐಒಟಿ, ರೇಸಿಂಗ್, ಖಗೋಳವಿಜ್ಞಾನ, ಸಿವಿಲ್, ಕೆಮಿಕಲ್ ಮುಂತಾದ ವೈವಿಧ್ಯಮಯ ಕ್ಷೇತ್ರಗಳಲ್ಲಿ ಅಸಂಖ್ಯಾತ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಇದರೊಂದಿಗೆ ಹಲವಾರು ಕಾರ್ಯಾಗಾರಗಳು, ವಿಚಾರ ಸಂಕಿರಣಗಳನ್ನು ಆಯೋಜಿಸಲಾಗಿದೆ.

ಬೈಕ್ ಸ್ಟಂಟ್ ಶೋ, ಹಸೀಬ್ ಖಾನ್ ಅವರ ಸ್ಟ್ಯಾಂಡ್-ಅಪ್ ಕಾಮಿಡಿ ಶೋಗಳು, ಪ್ರಸಿದ್ಧ ಇಲ್ಯೂಷನಿಸ್ಟ್, ಆಕರ್ಷ್ ಎಸ್ ಭಟ್ ಅವರ ಮ್ಯಾಜಿಕ್ ಶೋ ಮತ್ತು ಡಿಜೆ ಮೊಜೊ ಜೊಜೊ ಅವರ ಡಿಜೆ-ನೈಟ್ ಅನ್ನು ಒಳಗೊಂಡಿರುವ ಪ್ರೊ-ಶೋಗಳು ಇವೆ.

ಇಂಜಿನಿಯರ್ 2ಐ22 ವಿವಿಧ ವಿಶ್ವವಿದ್ಯಾನಿಲಯಗಳಿಂದ, ರಾಜ್ಯ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಲಕ್ಷಾಂತರ ವಿದ್ಯಾರ್ಥಿಗಳನ್ನು ಆಕರ್ಷಿಸಲು ನಿರೀಕ್ಷಿಸಲಾಗಿದೆ.

Samyukta Karnataka, Date: 23/09/22, P. No 2